<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆ: 740 /2024**

**ಸಾಕ್ಷಿಯನ್ನು ದಿಃ 14.10.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಮಹದೇವ | ಸಿಡಬ್ಲ್ಯೂ: 6 | ಪಿಡಬ್ಲ್ಯೂ: 2 |
| ತಂದೆಯ ಹೆಸರು | ದೊಡ್ಡಪ್ಪಯ್ಯ | | |
| ವಯಸ್ಸು | 57 ವರ್ಷ | | |
| ಕೆಲಸ | ಕೂಲಿ ವ್ಯವಸಾಯ | | |
| ವಾಸಸ್ಥಳ | ಬೀಜಗನಹಳ್ಳಿ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1 ರಿಂದ 5 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ಚಾಸಾ-1 ರವರನ್ನು 1ನೇ ಆರೋಪಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಅವರ ಮದುವೆಯಾಗಿ ಸುಮಾರು 12 ವರ್ಷವಾಗಿದೆ. ಅವರಿಗೆ ಇಬ್ಬರು ಮಕ್ಕಳಿದ್ದಾರೆ. 1ನೇ ಆರೋಪಿಗೆ ಬೇರೆಯವರ ಜೊತೆ ಅನೈತಿಕ ಸಂಬಂಧ ಇರುವ ಬಗ್ಗೆ ನಮ್ಮ ಗ್ರಾಮದಲ್ಲಿ ನ್ಯಾಯ ಪಂಚಾಯ್ತಿಗೆ ಕೊಟ್ಟಿದ್ದರು. ನಾವು ಒಂದಾಗಿ ಹೋಗಿ ಎಂದು ತಿಳುವಳಿಕೆ ಕೊಟ್ಟಿದ್ದೆವು. ಈ ಬಗ್ಗೆ ನಮಗೆ ಚಾಸಾ-1 ರಿಂದ 3 ರವರು ಹೇಳಿದ್ದರು. ದಿಃ 26.01.2023 ರಂದು ಸಂಜೆ 7-30 ಗಂಟೆಗೆ ನಾನು ನನ್ನ ಸೈಟಿನಲ್ಲಿದ್ದಾಗ 1ನೇ ಆರೋಪಿ ಚಾಸಾ-1 ರವರ ಮನೆಗೆ ಬಂದು ಲೋಫರ್ ಬೇವರ್ಸಿ ಎಂದು ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1 ರವರಿಗೆ ಕೈಗಳಿಂದ ಮೂಗು, ಬಾಯಿಗೆ ಹೊಡೆದ. ನಾನು ಮತ್ತು ಚಾಸಾ-5 ರವರು ಗಲಾಟೆಯನ್ನು ಬಿಡಿಸಿದೆವು. ನಂತರ ಚಾಸಾ-1 ರವರು 2023 ನವೆಂಬರ್ ನಲ್ಲಿ 1ನೇ ಆರೋಪಿಯ ಮನೆಗೆ ಹೋದರು. ಆಗ 1ನೇ ಆರೋಪಿ ಚಾಸಾ-1 ರವರನ್ನು ಮನೆಗೆ ಸೇರಿಸದೇ ತಂದೆಯನ್ನು ಕರೆತರುವಂತೆ ಕಳುಹಿಸಿದರು. ಈ ಬಗ್ಗೆ ನಾನು ದಿಃ 26.02.2024ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಚಾಸಾ-1 ರವರು ನವೆಂಬರ್ 2023ರಲ್ಲಿ ಗಂಡನ ಮನೆಗೆ ಹೋದಾಗ ಆರೋಪಿತರೆಲ್ಲರೂ ಸೇರಿ ಅವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನೀನು ಯಾವುದೇ ವರದಕ್ಷಿಣೆ ತಂದಿಲ್ಲ , ಬೇರೆಯವರನ್ನು ಮದುವೆಯಾಗಿದ್ದರೆ ಹೆಚ್ಚಿನ ವರದಕ್ಷಿಣೆ ಸಿಗುತ್ತಿತ್ತು ಎಂದು ಹೇಳಿರುವ ಬಗ್ಗೆ ನನಗೆ ಗೊತ್ತಾಯಿತು ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನೀನು ಪೋಲಿಸ್ ಠಾಣೆಗೆ ದೂರು ನೀಡಿರುತ್ತೀಯಾ ನಿನನ್ನು ಮನೆಗೆ ಸೇರಿಸುವುದಿಲ್ಲ ಎಂದು ಗಲಾಟೆ ಮಾಡಿ ಕೊಲೆ ಬೆದರಿಕೆ ಹಾಕಿದ್ದು ಅದೇ ದಿನ ಚಾಸಾ-1ರವರು ವಾಪಸ್ಸು ತಂದೆಯ ಮನೆಗೆ ಬಂದಿರುವುದು ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ನಂತರ ಚಾಸಾ-1 ರವರು ಆರೋಪಿತರ ವಿರುದ್ಧ ಮಹಿಳಾ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುವ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಜೆ.ಸಿ ಪರ ಶ್ರೀ. ಬಿ.ಎನ್.ಕೆ ವಕೀಲರಿಂದಃ**

ನಾನು ಚಾಸಾ-1 ರವರಿಗೆ ಸಂಬಂಧದಲ್ಲಿ ತಾತ ಆಗಬೇಕು. ಪೋಲಿಸರು ಮೊದಲೇ ಬರೆದು ತಂದಿದ್ದ ಹೇಳಿಕೆಗೆ ಅವರ ಕೋರಿಕೆಯ ಮೇರೆಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆ ಮತ್ತು ಚಾಸಾ-1 ರವರ ತವರು ಮನೆಯ ಮಧ್ಯದಲ್ಲಿ 10 ರಿಂದ 12 ಮನೆ ಇದೆ ಎಂದರೆ 5-6 ಮನೆ ಇದೆ. ನನ್ನ ಸೈಟು ಅವರ ಮನೆಯ ಪಕ್ಕದಲ್ಲಿದೆ. ಚಾಸಾ-1 ರವರ ಮನೆಯಿಂದ ನನ್ನ ಮನೆ ಸುಮಾರು 400 ರಿಂದ 500 ಮೀಟರ್ ದೂರ ಇದೆ ಎಂದರೆ 100 ಮೀಟರ್ ದೂರ ಇದೆ. ನಮ್ಮ ಮನೆಯಲ್ಲಿ ಒಟ್ಟು 5 ಜನ ವಾಸವಿದ್ದಾರೆ. ಘಟನೆ ನಡೆಯಿತು ಎನ್ನುವಾಗ ನನ್ನ ಸೈಟಿನಲ್ಲಿ ನಾನು ಒಬ್ಬನೇ ಇದ್ದೆ. ಚಾಸಾ-1 ರವರ ಮನೆಯಿಂದ ನನ್ನ ಸೈಟ್ ಪಕ್ಕದಲ್ಲಿಯೇ ಇದೆ. ನಾನು ಹೇಳಿದಂತಹ ಘಟನೆ ನಡೆಯದೇ ಇದ್ದರೂ ಸಹ ನಾನು ಚಾಸಾ-1 ರವರಿಗೆ ತಾತನಾಗಿರುವ ಕಾರಣ ಅವರಿಗೆ ಸಹಾಯ ಮಾಡಲೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ

26.01.2023ರಂದು 7-30ಕ್ಕೆ ಗಲಾಟೆ ನಡೆಯಿತು. ಗಲಾಟೆ ಜೋರಾಗಿಯೇ ನಡೆಯುತಿತ್ತು. ಅಕ್ಕ-ಪಕ್ಕದ ಮನೆಯವರು ಬರಲಿಲ್ಲವೇ ಎಂದರೆ ನಿಂತು ನೋಡುತ್ತಿದ್ದರು. ನನ್ನ ಮನೆಯಿಂದ ಯಾರು ಬರಲಿಲ್ಲ. ನಾನು ಯಾವುದೋ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಚಾಸಾ-1 ರವರಿಗೆ ಸಹಾಯವಾಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.